ಈ) ನೂತನ ಬಸ್ ನಿಲ್ದಾಣ ನಿರ್ಮಾಣದ ಒಟ್ಟು ಅಂದಾಜು ವೆಚ್ಚವು ರೂಪಾಯಿ 800 ಲಕ್ಷಗಳಾಗಿದ್ದು, ಮೊದಲನೇ ಹಂತದಲ್ಲಿ ರೂಪಾಯಿ 500 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಾಣ ಕಾರ್ಯವನ್ನು ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ.

ನಿರ್ಮಾಣ ಕಾರ್ಯಕ್ಕಾಗಿ, ಸೂಕ್ತ ನಕ್ಷೆ, ವಿನ್ಯಾಸ, ಯೋಜನಾ ವರದಿಯನ್ನು ತಜ್ಞರಿಂದ ಪಡೆಯಲು, ತಜ್ಞರನ್ನು ನೇಮಿಸುವ ಕಾರ್ಯಕ್ಕಾಗಿ ದಿನಾಂಕ: 24-12-2002 ರಂದು ಟೆಂಡರುಗಳನ್ನು ಕರೆಯಲಾಗಿದೆ. ನಿರ್ಮಾಣ ಕಾರ್ಯವು ಜೂನ್ 2003 ರಲ್ಲಿ ಪ್ರಾರಂಭಿಸುವ ನಿರೀಕ್ಷೆ ಇದ್ದು, ಡಿಸೆಂಬರ್ 2004ಕ್ಕೆ ಪೂರ್ಣಗೊಳ್ಳುವ ನಿರೀಕ್ಷೆ ಇರುತ್ತದೆ.

ಬಿಜಾಪುರ ನಗರಕ್ಕೆ ಕುಡಿಯುವ ನೀರು ಹಾಗೂ ಒಳಚರಂಡಿ ವ್ಯವಸ್ಥೆ

2108 (2581) - ಶ್ರೀ ಪಾಟೀಲ ಶಿವಾನಂದ ಸಿದ್ದರಾಮಗೌಡ (ತಿಕೋಟ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ನಗರಕ್ಕೆ ಘೋಷಿಸಿರುವ ಒಳಚರಂಡಿ ಮತ್ತು ಕುಡಿಯುವ ನೀರು ಪೂರೈಕೆ ಯೋಜನೆಗಳಿಗೆ ಮಂಜೂರು ಮಾಡಿರುವ ಅನುದಾನವೆಷ್ಟು?

ಆ) ಈ ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದ್ದಲ್ಲಿ ಯಾವ ಹಂತದಲ್ಲಿದೆ. ಯಾವಾಗ ಮುಕ್ತಾಯಗೊಳ್ಳುತ್ತದೆ.

ಇ) ಅನುದಾನ ಮಂಜುರಾಗದೇ ಇದ್ದಲ್ಲಿ ಯಾವ ಕಾಲಮಿತಿಯಲ್ಲಿ ಯೋಜನೆಗಳಿಗೆ ಅನುದಾನ ಒದಗಿಸಲಾಗುವುದು?

ಈ) ಯೋಜನೆಯನ್ನು ಕಾಲಮಿತಿಯೊಳಗೆ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದೇ ಹಾಗೂ ನೀಡುವ ಅನುದಾನವೆಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):

ಅ) ಬಿಜಾಪುರ ನಗರದ ಒಳಚರಂಡಿ ಮತ್ತು ಕುಡಿಯುವ ನೀರಿನ ಯೋಜನೆಗಳ ಸಲುವಾಗಿ ಮಂಡಳಿಗೆ 2002-03ನೇ ಸಾಲಿನ ಹಣ ಬಿಡುಗಡೆಯಾಗಿರುವುದಿಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಸ್ತಾವನೆಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ಬಿಜಾಪುರ ನಗರದಲ್ಲಿರುವ ರಸ್ತೆಗಳಿಗೆ ಗಣ್ಯರ ಹೆಸರುಗಳು

2109 (2582) - ಶ್ರೀ ಪಾಟೀಲ್ ಶಿವಾನಂದ ಸಿದ್ದಾರಾಮಗೌಡ (ತಿಕೋಟ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ನಗರದಲ್ಲಿರುವ ರಸ್ತೆಗಳೆಷ್ಟು; ಈ ರಸ್ತೆಗಳಿಗೆ ಗಣ್ಯರ ಹೆಸರುಗಳನ್ನು ಇಡಲಾಗಿದೆಯೇ?

ಆ) ಯಾವ ರಸ್ತೆಗಳಿಗೆ ಯಾವ ಗಣ್ಯರ ಹೆಸರುಗಳನ್ನು ಇಡಲಾಗಿದೆ.

ಇ) ಈ ಬಗ್ಗೆ ನಗರಸಭೆಯಲ್ಲಿ ದಾಖಲೆಗಳೇನಾದರೂ ಇದೆಯೇ: ಹಾಗಿದ್ದರೆ, ನಗರಸಭೆಯವರು ರಸ್ತೆಗಳಿಗೆ ಗಣ್ಯರ ಹೆಸರುಗಳನ್ನು ಸೂಚಿಸುವ ನಾಮಫಲಕಗಳನ್ನೇನಾದರೂ ಹಾಕಿರುತ್ತಾರೆಯೇ;

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):

ಅ) ಬಿಜಾಪುರದ ನಗರದಲ್ಲಿ ಈ ಕೆಳಗಿನಂತೆ ರಸ್ತೆಗಳು ಇರುವುವು;

1. ಡಾಂಬರು ರಸ್ತೆಗಳು 96.20 ಕಿ.ಮೀ
2. ಖಡಿ ರಸ್ತೆ (ಜೆಲ್ಲಿ) 193 ಕಿ.ಮೀ
3. ಮಣ್ಣಿನ ರಸ್ತೆಗಳು 92 ಕಿ.ಮೀ
4. ಸಿಮೆಂಟ್ ರಸ್ತೆಗಳು 4.15 ಕಿ.ಮೀ

ಕೆಲವು ರಸ್ತೆಗಳಿಗೆ ಗಣ್ಯರ ಹೆಸರುಗಳನ್ನು ಇಡಲಾಗಿದೆ.

ಆ)

ರಸ್ತೆಗಳು	ನಾಮಕರಣ ಮಾಡಿದ ಗಣ್ಯರ ಹೆಸರುಗಳು
1) ಬಸವೇಶ್ವರ ನಾಕಾ ಹತ್ತಿರ	ಇಬ್ರಾಹಿಂ ಆದಿಲ್ ಶಾಹಿ ವೃತ್ತ
2) ಗೋದಾವರಿ ಹೋಟೆಲ್ ಹತ್ತಿರ ಕ್ರಾಸ್‌ಗೆ	ಶ್ರೀ ಬಾಬು ಜಗಜೀವನರಾಂ ವೃತ್ತ
3) ಜೇಪಗಿ ಚಿಕ್ಕೋರಸ್ತೆಗೆ ನಗರಸಭೆ ಹತ್ತಿರ ಕ್ರಾಸ್‌ಗೆ	ಮಹಾತ್ಮಾಗಾಂಧಿ ವೃತ್ತ
4) ಡಿ.ಸಿ. ಬ್ಯಾಂಕ್ ಹತ್ತಿರ ಇರುವ ಕ್ರಾಸ್‌ಗೆ	ಶ್ರೀ ಬಸವೇಶ್ವರ ವೃತ್ತ
5) ಬರುಡ ನಿವಾರ ಸಂಸ್ಥೆ ಎದುರುಗಡೆ ಇರುವ ಕ್ರಾಸಿಗೆ	ಡಾ।। ಬಿ.ಆರ್ ಅಂಬೇಡ್ಕರ್ ವೃತ್ತ
6) ಡ್ರಿಲ್ಯಾಂಡ್ ಹತ್ತಿರ ಇರುವ ಕ್ರಾಸಿಗೆ	ಟಿಪ್ಪುಸುಲ್ತಾನ್ ವೃತ್ತ
7) ಶ್ರೀ ಬಾಲಾಜಿ ಮಂದಿರದಿಂದ ಅಂದರೆ (ರಾಮಮಂದಿರ ಹತ್ತಿರ ಹಾಗೂ ಕರ್ನಾಟಕ ಗೆಸ್ಟ್ ಹೌಸ್ ರಸ್ತೆಯ ಹತ್ತಿರ ಇರುವ ಕ್ರಾಸಿಗೆ)	ಡಾ।। ಹಡಗೆವಾರ ವೃತ್ತ
8) ಡಾ।। ಅಂಬಲಿ ದುಖಾನೆ ಹತ್ತಿರ ಇರುವ ಚೌಕದಿಂದ ಬಿ.ಎಲ್.ಡಿ.ಇ. ಇಂಜಿನಿಯರಿಂಗ್ ಕಾಲೇಜು ಇರುವ ರಸ್ತೆಗೆ	ಶ್ರೀ ಬಿ.ಎಂ. ಪಾಟೀಲ್ ರಸ್ತೆ
9) ಶ್ರೀ ಪಿಲೇಶ್ವರ ದೇವಸ್ಥಾನ ಹತ್ತಿರದಿಂದ ಪೂರ್ವ ರಸ್ತೆ ಅಂದರೆ ಇಂಡಿ ರೋಡ್ ಕೂಡುವ ರಸ್ತೆಯವರೆಗೆ	ಶ್ರೀ ಚನ್ನಬಸಪ್ಪ ಅಂಬಲಿ ರಸ್ತೆ
10) ಕವಗೇಟ್ ಹತ್ತಿರ ಇರುವ ಕ್ರಾಸಿಗೆ	ಶ್ರೀ ಛತ್ರಪತಿ ಶಿವಾಜಿ ವೃತ್ತ
11) ಜೋರಾಪುರ ನೀರಿನ ಟ್ಯಾಂಕ್ ಹತ್ತಿರ ಇರುವ ಕ್ರಾಸಿಗೆ	ಶ್ರೀ ಲೋಕಮಾನ್ಯ ತಿಲಕ ವೃತ್ತ

1	2
12) ಬಬೇಶ್ವರ ನಾಕದಿಂದ ಜಮಖಂಡಿ ಹಾಗು ಬಾಗಲಕೋಟಕ್ಕೆ ಹೋಗುವ ಕೂಡು ರಸ್ತೆಯ ಕ್ರಾಸಿಗೆ (ಸ್ಮಶಾನ ಹತ್ತಿರ)	ಶ್ರೀ ಸರ್ದಾರ್ ವಲ್ಲಬಾಯಿ ವೃತ್ತ
13) ಬಿಜಾಪುರದಿಂದ ಬಾಗಲಕೋಟೆ ಹೋಗುವ ರಸ್ತೆ ಮತ್ತು ಸರ್ದಾರ ವಲ್ಲಭಾಯಿ ಚೌಕದಿಂದ ಬಾಗಲಕೋಟೆಗೆ ಹೋಗುವ ಕೂಡ ರಸ್ತೆಗೆ (ವೆಸ್ಪ್ ಎಂಡ್ ಹೋಟೆಲ್ ಎದುರುಗಡೆ)	ಸರ್.ಎಂ. ವಿಶ್ವೇಶ್ವರಯ್ಯ ವೃತ್ತ
14) ದುರ್ಗಾ ರಸ್ತೆ (ಸೋಲಾಪೂರ ಸಾಕಾದಿಂದ ದರ್ಗಾವರೆಗೆ)	ಶ್ರೀ ಸಿಂಪಿ ಲಿಂಗಣ್ಣ ರಸ್ತೆ
15) ತೊರವಿ ರಸ್ತೆ (ಜೋರಾಪೂರ ನೀರಿನ ಟ್ಯಾಂಕದಿಂದ ಆಲ್ ಅಮೀನ ಮೆಡಿಕಲ್ ಕಾಲೇಜವರೆಗೆ)	ಶ್ರೀ ಆರ್.ಜೆ. ದುಬೆ ರಸ್ತೆ
16) ಬಾಗಲಕೋಟೆ ರಸ್ತೆ (ಬಾಗಲಕೋಟೆ ಕ್ರಾಸ್‌ನಿಂದ ರೇಲ್ವೆ ಗೇಟ್‌ವರೆಗೆ)	ಶ್ರೀ ಬಿ.ಆರ್ ಪಾಟೀಲ (ಕನಮಡಿ) ರಸ್ತೆ
17) ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿ ಹತ್ತಿರ ಇರುವ ಕ್ರಾಸಿಗೆ	ಶ್ರೀ ಮಹಾರಾಣಾ ಪ್ರತಾಪ ಸಿಂಹ ವೃತ್ತ
18) ಇಬ್ರಾಹಿಂಪೂರ ರೇಲ್ವೆ ಗೇಟ್ ಹತ್ತಿರ ವಿವೇಕನಗರ ಪೂರ್ವದಿಕ್ಕಿನ ಸ್ಥಳದ ಕ್ರಾಸಿಗೆ	ಶ್ರೀ ನಂದಿ ಬಸವೇಶ್ವರ ವೃತ್ತ
19) ಜೋರಾಪುರ ನೀರಿನ ಟ್ಯಾಂಕ್‌ದಿಂದ ಬಂಜಾರ ಕ್ರಾಸಿನವರಿಗೆ (ಸೋಲಾಪುರ ರಸ್ತೆ)	ಶ್ರೀ ಬಂಧನಾಳ ಶಿವಯೋಗಿ ಸಂಗನಬಸವ ಸ್ವಾಮಿ ರಸ್ತೆ
20) ಸ್ಟೇಡಿಯಂ ಕ್ರಾಸದಿಂದ ರೇಲ್ವೆ ಸ್ಟೇಷನ್‌ವರೆಗೆ	ಶ್ರೀ ಶಿ.ಸು. ಸಂಗಮೇಶ ರಸ್ತೆ
21) ವಾನಂ.1 ರ ಇಂಜನಿಯರಿಂಗ್ ಕಾಲೇಜದಿಂದ ಬಂಜಾರ ಕ್ರಾಸಿಗೆ ಕೂಡುವ ರಸ್ತೆಗೆ	ಶ್ರೀ ಶರಣವೀರೇಶ ರಸ್ತೆ
22) ಶ್ರೀ ಛತ್ರಪತಿ ಶಿವಾಜಿ ವೃತ್ತದಿಂದ ಸ್ಟೇಡಿಯಂ ಕ್ರಾಸ್‌ದವರೆಗೆ ಇರುವ ಚಿಕ್ಕೋಡಿ ಜೇವರಗಿ ರಸ್ತೆಗೆ	ಶ್ರೀ ಮಹಾತ್ಮಾಗಾಂಧಿ, ರಸ್ತೆ
23) ಮಿಲನಬಾರ (ಡೈನಿಂಗ ಹಾಲ)ದಿಂದ ಶ್ರೀ ಜೈನ ಮಂದಿರದವರೆಗೆ ಇರುವ ರಸ್ತೆಗೆ	ಶ್ರೀ ಬಸವೇಶ್ವರ ರಸ್ತೆ
24) ಮಹಾತ್ಮಾಗಾಂದಿ ವೃತ್ತದಿಂದ ಶ್ರೀ ಸಿದ್ದೇಶ್ವರ ಮಂದಿರದವರೆಗಿನ ರಸ್ತೆಗೆ	ಶ್ರೀಸಿದ್ದೇಶ್ವರ ರಸ್ತೆ
25) ಗೋಡಬೋಳೆ ಮಾಳಾದ ಸರಕಾರಿ ಪ್ರೌಡಶಾಲೆಯವರೆಗೆ (ಮೀನಾಕ್ಷಿ ಚೌಕ)	ಲೋಕಮಾನ್ಯ ತಿಲಕ ರಸ್ತೆ

1	2
26) ಎ.ಪಿ.ಎಂ.ಸಿ. ಗೇಟದಿಂದ ಸ್ಟೇಶನ್ ಬ್ಯಾಕರೋಡ (ಬ್ರಿಡ್ಜ್)ದವರೆಗೆ	ಶ್ರೀ ಬಿ.ಕೆ. ಗುಡದಿನ್ನಿ ರಸ್ತೆ
27) ನಾಲಬಂದ ಚೌಕದಿಂದ ಶ್ರೀ ಗಣಪತಿ ಚೌಕದವರೆಗೆ	ಶ್ರೀ ನೆಹರೂ ರಸ್ತೆ
28) ವಿಜಯಹೌಸಿಂಗ್ ಕಾಲನಿಯಿಂದ ಸೋಲಾಪುರ ಕೂಡುವ ರಸ್ತೆ (ಲಿಂಗದರಸ್ತೆ)	ಶ್ರೀ ಫ.ಗು. ಹಳಕಟ್ಟಿ ರಸ್ತೆ
29) ಗೋಲಗುಮ್ಮಟ ಎದುರಿನ ರಸ್ತೆಯಿಂದ ಹಕೀಮ ಚೌಕದ ರಸ್ತೆಯವರೆಗೆ	ಶ್ರೀಷಣ್ಮುಕಾರೂಢ ಮಠದ ರಸ್ತೆ.

ಇ) ನಗರಸಭೆಯಲ್ಲಿ ಪೂರ್ಣ ಪ್ರಮಾಣದಲ್ಲಿ ರಸ್ತೆಗಳಿಗೆ ಮತ್ತು ವೃತ್ತಗಳಿಗೆ ನಾಮಕರಣ ಮಾಡಿರುವ ಬಗ್ಗೆ ದಾಖಲೆಗಳು ಇರುವುದಿಲ್ಲ, ದಾಖಲಾತಿಗಳನ್ನು ಕ್ರೋಢೀಕರಿಸಿ ಅದರಂತೆ ರಿಜಿಸ್ಟರ್‌ನಲ್ಲಿ ಅಧಿಕೃತವಾಗಿ ದಾಖಲಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಕೆಲವು ರಸ್ತೆ ಮತ್ತು ವೃತ್ತಗಳಿಗೆ ನಾಮಕರಣ ಫಲಕಗಳನ್ನು ಹಾಕಲಾಗಿದೆ.

ಗದಗ್ ತಾಲ್ಲೂಕು ಮುಳಗುಂದ ಪಟ್ಟಣಕ್ಕೆ ಐ.ಡಿ.ಎಸ್.ಎಂ.ಟಿ ಯೋಜನೆ

2110 (2232) - ಶ್ರೀ ಪಾಟೀಲ್ ಸಿದ್ದಲಿಂಗನವಾಡ ಸಿದ್ದನಗೌಡ (ತಿಕೋಟ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ಜಿಲ್ಲೆ ಗದಗ ತಾಲ್ಲೂಕು ಮುಳಗುಂದ ಪಟ್ಟಣ ಪಂಚಾಯಿತಿಯು ಐ.ಡಿ.ಎಸ್.ಎಂ.ಟಿ ಯೋಜನೆ ಆಧ್ಯತಾ ಪಟ್ಟಿಯಲ್ಲಿ ಸೇರಿದೆಯೇ?

ಆ) ಸೇರಿದ್ದಲ್ಲಿ, ಹಣ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಕುಮಾರ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು):

ಅ) ಸೇರಿದೆ.

ಆ) ಡಿಸಂಬರ್ ತಿಂಗಳ ಅಂತ್ಯದೊಳಗೆ ಪೌರಾಡಳಿತ ನಿರ್ದೇಶನಾಲಯವು ಹಣ ಬಿಡುಗಡೆ ಮಾಡಲಾಗುವುದು.

ಗದಗ ಬಿಜಾಪುರ ರೈಲ್ವೆ ಗೇಜ್ ಪರಿವರ್ತನೆ

2111 (2396) - ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ): ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನ ಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ರೈಲ್ವೆ ಇಲಾಖೆ ಮತ್ತು ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ ಗದಗ-ಬಿಜಾಪುರ ರೈಲು ಗೇಜು ಪರಿವರ್ತನೆ ಕಾರ್ಯ ಹಮ್ಮಿಕೊಂಡಿದ್ದು ನಿಜವೆ;

ಆ) ಈ ಕಾರ್ಯಕ್ಕಾಗಿ ಪ್ರಸಕ್ತ ವರ್ಷ ಕೇಂದ್ರ ಸರಕಾರ 20 ಕೋಟಿ ರೂ ಹಾಗೂ ರಾಜ್ಯ ಸರ್ಕಾರ 20 ಕೋಟಿ ರೂ ಇದಕ್ಕಾಗಿ ವಿನಿಯೋಗ ಮಾಡಲು ಯೋಜಿಸಿ ಆಯವ್ಯಯ ಮಂಡಿಸಿದ್ದು ನಿಜವೆ;